ಮುಗುಳುನಗುತ್ತಾ, 'ಆನಂದಣ್ಣ, ಜೀವನದಲ್ಲಿ ಒಂದು ರಹಸ್ಯ ಇದೆ. ನಿಮಗೆ ಬಂದ ಯಶಸ್ಸನ್ನು ನೀವು ಹೀಗೆ ಪ್ರಚಾರ ಮಾಡಿದಾಗ ಉಳಿದವರು ನಿಮ್ಮ ಕಡೆ ಆಕರ್ಷಿತರಾಗುತ್ತಾರೆ. ಯಶಸ್ಸು ಇನ್ನಷ್ಟು ಯಶಸ್ಸನ್ನು ಆಕರ್ಷಿಸುತ್ತದೆ. ಈ ಪ್ರೋಗ್ರಾಮ್ ನೋಡಿದವರು ಸೀತಾಪುರಕ್ಕೆ ಇನ್ನಷ್ಟು ಒಳ್ಳೆಯದು ಮಾಡಲು ಮುಂದೆ ಬರ್ತಾರೆ. ಸೀತಾಪುರದಲ್ಲಿ ಆಗುವ ವಿಷಯ ಉಳಿದವರಿಗೂ ಅದ್ಭುತವಾಗಿ ಕಾಣುತ್ತದೆ' ಅಂದ.

ಪ್ರಭಾಕರ 'ಯಶಸ್ಸು ಇನ್ನಷ್ಟು ಯಶಸ್ಸನ್ನು ಆಕರ್ಷಿಸುತ್ತದೆ' ಎಂಬ ವಾಕ್ಯವನ್ನು ಒಂದೆರಡು ಸಲ ಅವನಷ್ಟಕ್ಕೇ ಹೇಳಿದ. ಆನಂದಣ್ಣ 'ಕಾರಂತರೇ, ನಿಮ್ಮ ತಲೆಗೆ ಕೊಡ್ಬೇಕು... ಹೇಗೆ ಇಂತಹ ಐಡಿಯಾ ನಿಮಗೆ ಹೊಳೆಯುತ್ತದೆ ಗೊತ್ತಾಗುವುದಿಲ್ಲ. ಎಲ್ಲಾ ದೇವರ ಕೃಪೆ. ಮನೆಗೆ ಹೊರಡೋಣವೇ?' ಎಂದರು.

ಸಂಜಯ್ ಆಶಾಳ ಜೊತೆ ಶಾಸ್ತ್ರಿಗಳ ಮನೆ ಕಡೆಗೆ ಹೊರಟ. ಪ್ರಭಾಕರ ಎದುರು ಬಂದು ಸಂಜಯನ ಕಾಲು ಮುಟ್ಟಿ ನಮಸ್ಕಾರ ಮಾಡಿ ನಿಂತ. ಸಂಜಯ್ ಪ್ರಭಾಕರನನ್ನು ಅಪ್ಪಿ ಹಿಡಿದು ಕಳಿಸಿಕೊಟ್ಟ. ಸಂಜಯ್ ಮತ್ತು ಆಶಾ ಮನೆಯ ಕಡೆಗೆ ನಡೆಯುತ್ತಿದ್ದರು.

'ಏನು ಮೇಡಂ, ನೀವು ಏನೂ ಮಾತನಾಡುತ್ತಿಲ್ಲ?' ಸಂಜಯ್ ವ್ಯಂಗ್ಯವಾಗಿ ಕೇಳಿದ.

'ಸೀತಾಪುರದಲ್ಲಿ ಆಗುತ್ತಿರುವ ಬದಲಾವಣೆ ನೋಡಿ ಖುಷಿಯೂ ಆಗುತ್ತಿದೆ, ಸ್ವಲ್ಪ ಗಾಬರಿಯೂ ಆಗುತ್ತಿದೆ, ಭಯವೂ ಆಗುತ್ತಿದೆ, ಏನೋ ವಿಚಿತ್ರ ಭಾವನೆ' ಅಂದಳು ಆಶಾ.

'ಖುಷಿ ಅರ್ಥವಾಗುತ್ತದೆ, ಆದರೆ ಗಾಬರಿ ಯಾಕೆ? ನಾನು ಮಾಡುತ್ತಿರುವ ಪರಿವರ್ತನೆಯಿಂದ ಸೀತಾಪುರಕ್ಕೆ ತೊಂದರೆ ಆಗುತ್ತದೆ ಹೇಳಿಯೋ?' ಸಂಜಯ್ ಪ್ರಶ್ನಿಸಿದ.

ಆಶಾ ಸಂಜಯನ ಮುಖ ನೋಡಿದಳು. 'ಸೀತಾಪುರಕ್ಕೆ ತೊಂದರೆಯಾಗುತ್ತದೆ ಎಂಬ ಭಯ ನನಗಿಲ್ಲ' ಅಂದಳು.

'ಮತ್ಯಾಕೆ ಭಯ?' ಸಂಜಯ್ ಕೇಳಿದ.

'ಯಾಕೋ ಗೊತ್ತಿಲ್ಲ, ಮನಸ್ಸಿನಲ್ಲಿ ಏನೋ ಭಯ, ಆತಂಕ' ಅಂದಳು ಆಶಾ.

'ನೋಡು, ಬದಲಾವಣೆ ಎಲ್ಲರಿಗೂ ಸುಲಭವಲ್ಲ. ಯಾವುದೇ ವಿಷಯ ಬದಲಾಗುವಾಗ ಗಾಬರಿ–ಭಯ ಸಹಜ. ನನಗೂ ಗಾಬರಿಯಾಗುತ್ತದೆ. ನನಗೆ ಅದು ಈಗೀಗ ಅಭ್ಯಾಸ ಆಗಿದೆ ಅಷ್ಟೇ. ನಾನು ನೋಡಿದ ಬಹಳ ಧೈರ್ಯದ ಹುಡುಗಿಯರಲ್ಲಿ ನೀನೂ ಒಬ್ಬಳು, ನೀನು ಭಯ ಪಡಬೇಕಾಗಿಲ್ಲ' ಅಂದ ಸಂಜಯ್.

'ನಾನು ಬದಲಾವಣೆಗೆ ಭಯಪಡುತ್ತಿಲ್ಲ, ಆದರೆ ಅದರ ವೇಗಕ್ಕೆ ಭಯ ಪಡುತ್ತಿದ್ದೇನೆ. ಏನಾದರೂ ಎಡವಟ್ಟು ಆಗಿ ನಿಮ್ಮ ಮೇಲೆ ಬರುತ್ತದೋ ಅಂತ ಭಯ. ಅದೂ ನಿಮ್ಮ ನವ್ಯಳನ್ನು ನೋಡಿದ ಮೇಲೆ... ಅಬ್ಬಾ ಏನು ಹುಡುಗಿ... ನಾನಂತೂ ಅವಳನ್ನು ನಂಬುವುದಿಲ್ಲ. ಅವಳು ಯಾರನ್ನೂ ಹಸಿ ಹಸಿಯಾಗಿ ತಿಂದು ಬಿಡಬಲ್ಲಳು. ಬೇಡದ್ದನ್ನೆಲ್ಲ ಮಾಡಿ ನಿಮ್ಮ ತಲೆ ಮೇಲೆ ಹಾಕುತ್ತಾಳೋ ಅನಿಸುತ್ತಿದೆ' ಅಂದಳು ಆಶಾ.

'ಓಹೋ... ಈಗ ಗೊತ್ತಾಯಿತು... ನನಗೆ ನವ್ಯಳಂತಹ ಹುಡುಗಿ ಹೊಸತಲ್ಲ. ಇಂಥವರು ಹೊರ ಪ್ರಪಂಚದಲ್ಲಿ ಬೇಕಾದಷ್ಟಿದ್ದಾರೆ. ಅವಳಿಗೂ ನಿನಗೂ ಹಗಲು ರಾತ್ರಿಯ ವ್ಯತ್ಯಾಸವಿದೆ...' ಅಂದ ಸಂಜಯ್.

'ಏನೇ ಇರಲಿ, ಕೊನೆಗೆ ನಿಮಗೆ ತೊಂದರೆ ಮಾಡದಿದ್ದರೆ ಸಾಕು' ಅಂದಳು ಆಶಾ. ಆ ವೇಳೆಗೆ ಅವರು ಶಾಸ್ತ್ರಿಗಳ ಮನೆ ತಲುಪಿದ್ದರು.

ಮನೆ ತಲುಪುವಾಗ ಸ್ವಲ್ಪ ರಾತ್ರಿಯಾಗಿತ್ತು. ಶಾಸ್ತ್ರಿಗಳು ಮನೆಯ ಅಂಗಳದಲ್ಲಿ ಸಂಜಯ್ ಮತ್ತು ಆಶಾ ಬರುವುದನ್ನೇ ಕಾದು ಕುಳಿತಿದ್ದರು. ಸಂಜಯನನ್ನು ನೋಡಿದವರೇ, 'ಬಂದೆಯಾ, ಹೋಗುವ, ಊಟ ಮಾಡುವ' ಎನ್ನುತ್ತಾ ಮನೆಯೊಳಗೆ ನಡೆದರು. ಊಟದ ನಂತರ ಸಂಜಯನಲ್ಲಿ 'ಏನಪ್ಪಾ ಸಂಜಯ್, ನೀನು ಊರಿನಲ್ಲಿ ಬಾರೀ ಪ್ರಸಿದ್ಧನಾಗಿದ್ದಿಯಂತೆ.. ಊರಿಗೆ ಯಾರೋ ಎರಡು ಹುಡುಗರನ್ನು ಕರ್ಕೊಂಡು ಬಂದಿದ್ದಿಯಂತೆ.. ನಮ್ಮ ಮಾದನನ್ನು ವಿದೇಶಕ್ಕೆ ಕರ್ಕೊಂಡು ಹೋಗ್ತಿಯಂತೆ' ಅಂದರು.

ಸಂಜಯನಿಗೆ ಏನು ಹೇಳಬೇಕು ಗೊತ್ತಾಗಲಿಲ್ಲ. ಆದರೂ 'ಶಾಸ್ತ್ರಿಗಳೇ, ನಿಮಗೆ ಹೇಳಿದ ಹಾಗೆ ನಾನು ಸೋಶಿಯಲ್ ಮೀಡಿಯಾದ ಎಕ್ಸ್‌ಪರ್ಟ್. ನನ್ನ ಅನುಯಾಯಿಗಳನ್ನು ಬಳಸಿ ಸ್ವಲ್ಪ ಸೀತಾಪುರಕ್ಕೆ ಹೆಸರು ತರೋಣ ಅಂತ ಹೊರಟಿದ್ದೇನೆ' ಅಂದ.

'ಹೆಸರೋ ಗಿಸರೋ ಆ ದೇವನೇ ಬಲ್ಲ. ಆದರೂ ನೀನು ಬದಲಾವಣೆ ತರುತ್ತಿದ್ದೀಯಪ್ಪ, ಅದೂ ದೊಡ್ಡ ವಿಷಯ' ಎಂದರು ಶಾಸ್ತ್ರಿಗಳು.

'ಶಾಸ್ತ್ರಿಗಳೇ, ನಿಜಕ್ಕೂ ಹೇಳುವುದಿದ್ದರೆ ನೀವು ಮನಸ್ಸು ಮಾಡಿದರೆ ವಿಶ್ವಪ್ರಸಿದ್ಧಿಯಾಗಬಹುದು. ನಿಮ್ಮ ಔಷಧದಲ್ಲಿ ವಿಶೇಷ ಶಕ್ತಿ ಇದೆ. ನಿಮ್ಮ ಜೀವನವೇ ಒಂದು ಆದರ್ಶ. ನೀವು ಹ್ಞೂಂ ಅಂದರೆ ಸಾಕು, ನಾಳೆ ವಿಶೇಷ ಪ್ರೋಗ್ರಾಮ್ ಮಾಡಿ ನಿಮ್ಮನ್ನು ಹೊರ ಜಗತ್ತಿನಲ್ಲಿ ದೊಡ್ಡ ವ್ಯಕ್ತಿ ಮಾಡ್ತೇನೆ' ಅಂದ ಸಂಜಯ್.

'ನೋಡು ಸಂಜಯ್, ಮತ್ತೆ ಅದೇ ಮಾತು. ನನ್ನ ಈ ಪ್ರಾಯದಲ್ಲಿ ಹೆಚ್ಚು ಹಣವಾಗಲಿ, ಬೇರೆಯವರ ಹೊಗಳಿಕೆಯಾಗಲಿ ನನಗೆ ಬೇಡ. ನನ್ನನ್ನು ನನ್ನಷ್ಟಕ್ಕೆ ಬಿಟ್ಟು ಬಿಡು' ಅಂದರು ಶಾಸ್ತ್ರಿಗಳು ನಿರ್ಲಿಪ್ತರಾಗಿ.

'ಅಜ್ಜ, ನೀವು ಈಗಾಗಲೇ ಸೋಶಿಯಲ್ ಮೀಡಿಯಾದಲ್ಲಿ ಬಹಳ ಪ್ರಸಿದ್ಧ. ಆ ಸಲ ತೆಗೆದ ಸ್ವಲ್ಪ ಫೋಟೊಗಳನ್ನು ಸಂಜಯ್ ಈಗಾಗಲೇ ಸೋಶಿಯಲ್ ಮೀಡಿಯಾದಲ್ಲಿ ಹಾಕಿದ್ದಾರೆ. ಜನಕ್ಕೆ ನಿಮ್ಮ ಬಗ್ಗೆ ಗೊತ್ತಿದೆ' ಎಂದಳು ಆಶಾ.

ಶಾಸ್ತ್ರಿಗಳಿಗೆ ಕುತೂಹಲವಾಯಿತು. ಆಶಾ ಅವರ ಪಕ್ಕಕ್ಕೆ ಹೋಗಿ ಕುಳಿತಳು. ನಿಧಾನವಾಗಿ ಫೇಸ್‌ಬುಕ್, ಯೂಟ್ಯೂಬ್‌ಗಳಲ್ಲಿ ಇರುವ ಶಾಸ್ತ್ರಿಗಳ ಬಗೆಗಿನ ಬರಹ, ಫೋಟೊ, ವಿಡಿಯೊಗಳನ್ನು ತೋರಿಸಿದಳು.

ಸೀತಮ್ಮನಿಗೆ ಖುಷಿಯಾಯಿತು. ಶಾಸ್ತ್ರಿಗಳು ನಗಲಿಲ್ಲ. ಪ್ರತಿಕ್ರಿಯೆಯನ್ನೂ ನೀಡಲಿಲ್ಲ.

ಮರುದಿನ ಎಂದಿನಂತೆ ಸಂಜಯ್ ಶೆಟ್ಟರ ಮನೆಗೆ ಹೋದ. ಪ್ರಭಾಕರನನ್ನು ಕರ್ಕೊಂಡು ಕಾಟೇಜ್ ಇರುವಲ್ಲಿಗೆ ಹೋದ. ಆ ವೇಳೆಗೆ ಕಾಟೇಜ್ ಸುಮಾರಾಗಿ ಸಿದ್ಧವಾಗಿತ್ತು. ಇಬ್ಬರೂ ಸೇರಿ ಕಾಟೇಜ್‌ನ ಹಾಗೂ ಸುತ್ತಲಿನ ಫೋಟೊ–ವಿಡಿಯೊ ತೆಗೆದರು. ಸಂಜಯ್ ಜನರಿಗೆ ಕಾಟೇಜ್‌ನ ಎದುರು ನಿಂತುಕೊಂಡು ವಿಶೇಷ ಮನವಿ ಮಾಡಿದ. 'ಈ ಕಾಟೇಜ್‌ಗಳು ಸೀತಾಪುರದ ಹೊಸ ಬದುಕಿನ ಪ್ರತೀಕ. ತನಗೆ ಇಲ್ಲಿ ಪ್ರತೀ ಮನೆಯಲ್ಲಿ, ಗುಡ್ಡದಲ್ಲಿ ಕಾಟೇಜ್ ಮಾಡಬೇಕಿದೆ. ಇದು ಭೂಲೋಕದ ಸ್ವರ್ಗವೇ ಸರಿ. ಇಲ್ಲಿಯ ಹವಾಮಾನದಲ್ಲಿ ಒಂದುವಾರ ಇದ್ದರೆ ಯಾವ ಕಾಯಿಲೆಯೂ ಗುಣವಾದೀತು. ಇಲ್ಲಿಯ ಗಾಳಿ ಅಷ್ಟು ಸ್ವಚ್ಛ. ಇಲ್ಲಿಯ ರಾತ್ರಿ ಆಕಾಶ ಇಡೀ ಜೀವನದಲ್ಲೇ ನೋಡಿರದಷ್ಟು ಸ್ಪಷ್ಟ. ಇಲ್ಲಿಯ ಜನ ಮುಗ್ಧರೂ ನಂಬಿಕಸ್ಥರೂ ಸ್ನೇಹಜೀವಿಗಳೂ ಇದ್ದು ಹೊರಗಿನಿಂದ ಬಂದವರನ್ನು ದೇವರಂತೆ ನೋಡಿಕೊಳ್ಳುತ್ತಾರೆ. ಇಲ್ಲಿಗೆ ಬಂದು ಒಂದುವಾರ ನಿಂತರೆ ಆ ಅನುಭವ ಜೀವನ ಪೂರ್ತಿ ಮರೆಯಲು ಸಾಧ್ಯವಿಲ್ಲ...' ಇತ್ಯಾದಿ ಹೇಳಿದ.

ಕೊನೆಗೆ ಸಂಜಯ್ ಸೀತಾಪುರದ ಅಭಿವೃದ್ಧಿಯ ದೃಷ್ಟಿಯಿಂದ ಈ ಕಾಟೇಜ್‌ಗಳಲ್ಲಿ ಮೊದಲು ಒಂದುವಾರ ಉಳಕೊಳ್ಳುವ ಅವಕಾಶ ವನ್ನು ಹರಾಜು ಹಾಕುವುದಾಗಿಯೂ ಯಾರು ಹೆಚ್ಚು ಹಣ ಕೊಡುತ್ತಾರೆಯೋ ಆ ಜನರಿಗೆ ನೀಡುವುದಾಗಿಯೂ ಹೇಳಿದ. ಹಾಗೆ ಆಯ್ಕೆಯಾದವರಿಗೆ ಸಂಜಯನ ಪ್ರೋಗ್ರಾಮ್‌ನಲ್ಲೂ ಭಾಗಿಯಾಗಲು ಅವಕಾಶವಿದೆ ಎಂಬ ವಿಶೇಷ ಆಕರ್ಷಣೆಯನ್ನು ಮುಂದಿಟ್ಟ.

ಈ ಮನವಿ, ವಿಡಿಯೊ, ಫೋಟೊಗಳು 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮದಲ್ಲಿ ಪ್ರಸಾರವಾದವು. ಜೊತೆಗೆ ಎಲ್ಲಾ ಸೋಶಿಯಲ್ ಮೀಡಿಯಾ ಸೈಟ್‌ಗಳಲ್ಲಿ ಪ್ರಕಟವಾದವು. ಹಲವು ಮನೋರಂಜನಾ ಪತ್ರಿಕೆಗಳು ಮ್ಯಾಗಜಿನ್‌ಗಳು ಇದನ್ನು ಪ್ರಕಟಿಸಿದವು. ಒಟ್ಟಿನಲ್ಲಿ ಅದಕ್ಕೆ ವ್ಯಾಪಕ ಪ್ರಚಾರ ಸಿಕ್ಕಿತು. ಇದಾದ ಒಂದೆರಡು ದಿನದಲ್ಲಿ ಕಾಟೇಜ್‌ಗಳಲ್ಲಿ ಮೊದಲು ಉಳಕೊಳ್ಳುವ ಅವಕಾಶಕ್ಕಾಗಿ ಸೋಶಿಯಲ್ ಮೀಡಿಯಾದಲ್ಲಿ ಹರಾಜು ಪ್ರಾರಂಭವಾಯಿತು.

ಈ ನಡುವೆ ಪ್ರಭಾಕರ ಊರಿನಲ್ಲಿ ಪ್ರಸಿದ್ಧನಾಗಿದ್ದ. ಅವನನ್ನು ಜನ 'ಸಣ್ಣ ಶೆಟ್ಟರು' ಎಂದು ಕರೆಯಲು ಪ್ರಾರಂಭ ಮಾಡಿದ್ದರು. ಕೆಲವರು ಸುಖಾಸುಮ್ಮನೆ ಶೆಟ್ಟರ ಮನೆಗೆ ಬಂದು ಪ್ರಭಾಕರನನ್ನು ಭೇಟಿಯಾಗಿ ಸಂದೇಶ್ ಹಾಗೂ ನವ್ಯಳ ಭೇಟಿಯ ಅವಕಾಶ ಕೇಳತೊಡಗಿದರು. ಇದರಿಂದ ಪ್ರಭಾಕರನೇ ಸಂದೇಶ್ ಮತ್ತು ನವ್ಯಳನ್ನು ಯಾರು ಎಷ್ಟು ಸಮಯದಲ್ಲಿ ಭೇಟಿಯಾಗಬಹುದು ಎಂಬುದನ್ನು ನಿರ್ಧರಿಸಲು ಮುಂದಾದ.

ಸಂದೇಶ್ ಮತ್ತು ನವ್ಯ ಊರಿನ ಮನೆಮನೆಗಳಿಗೆ ಹೋಗಿ ಎಲ್ಲರನ್ನೂ ಭೇಟಿಯಾಗಲು ತೊಡಗಿದರು. ಅವರ ವಿಶೇಷಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಾಕಲು ಶುರು ಮಾಡಿದರು. ಪ್ರತೀ ದಿನ ನೋಡುಗರಿಗೆ